# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 56
ಮಾನ್ಯ ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 04-03-2025
ಉತ್ತರಿಸುವ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋಲಾರ ನಗರಸಭೆಗೆ ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೂ ಸ್ವಚ್ಛ ಭಾರತ್ ಮಿಷನ್-1.10 ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಂದಿದೆ; ಈ ಅನುದಾನವನ್ನು ಯಾವ ಯಾವ ಕಾಮಗಾರಿಗೆ ಮತ್ತು ಖರೀದಿಗಳಿಗೆ ಬಳಸಿಕೊಳ್ಳಲಾಗಿದೆ;</td><td>ಸ್ವಚ್ಛ ಭಾರತ್ ಮಿಷನ್ (ನಗರ)-1.0 ಯೋಜನೆಯಡಿಯಲ್ಲಿ ಕೋಲಾರ ನಗರಸಭೆಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರೂ. 595.66 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.<br>(ರೂ. ಲಕ್ಷಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ಬಿಡುಗಡೆಯಾಗಿರುವ ಒಟ್ಟು ಮೊತ್ತ</th></tr>
<tr><td>1</td><td>2021-22</td><td>0.00</td></tr>
<tr><td>2</td><td>2022-23</td><td>595.66</td></tr>
<tr><td>3</td><td>2023-24</td><td>0.00</td></tr>
<tr><td></td><td>ಒಟ್ಟು</td><td>595.66</td></tr>
</table>
ಅನುದಾನ ಬಳಸಿಕೊಂಡಿರುವ ಕಾಮಗಾರಿಗಳ ವಿವರವನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ಇ.ವಿ. ಚಾರ್ಜಿಂಗ್ ಪಾಯಿಂಟ್, ಸಿ.ಸಿ.ಟಿ.ವಿ. ಕ್ಯಾಮರಾ ಸೇರಿದಂತೆ ಖರೀದಿಸಿರುವುದರಲ್ಲಿ ಸುಮಾರು ರೂ. 2.4 ಕೋಟಿಗೂ ಅಧಿಕ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ರೂ. 2.40 ಕೋಟಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ;<br>(ರೂ. ಲಕ್ಷಗಳಲ್ಲಿ)
<table>
<tr><th>ಕ್ರ. ಸಂ.</th><th>ವಾಹನ / ಯಂತ್ರೋಪಕರಣಗಳ ವಿವರ</th><th>ಪ್ರಮಾಣ</th><th>ಅಂದಾಜು ಮೊತ್ತ</th></tr>
<tr><td>1</td><td>ವಿದ್ಯುತ್ ಮಿನಿ ಟಿಪ್ಪರ್</td><td>6</td><td>98.00</td></tr>
<tr><td>2</td><td>ಟ್ರ್ಯಾಕ್ಟರ್ ಇಂಜಿನ್</td><td>2</td><td>20.00</td></tr>
<tr><td>3</td><td>ಪುಷ್ ಕಾರ್ಟ್</td><td>15</td><td>5.50</td></tr>
<tr><td>4</td><td>ವೀಲ್ ಬ್ಯಾರೋ</td><td>12</td><td>3.0</td></tr>
<tr><td>5</td><td>ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ</td><td>1</td><td>48.00</td></tr>
<tr><td>6</td><td>ಕಾಂಪ್ಯಾಕ್ಟರ್</td><td>1</td><td>51.00</td></tr>
<tr><td>7</td><td>ಸಿ.ಸಿ. ಕ್ಯಾಮೆರಾಗಳು</td><td>6</td><td>6.50</td></tr>
<tr><td>8</td><td>ಇ.ವಿ. ವಾಹನಗಳ ಚಾರ್ಜಿಂಗ್ ಪಾಯಿಂಟ್</td><td>2</td><td>8.00</td></tr>
<tr><td colspan="2">Total</td><td>45</td><td>240.00</td></tr>
</table>
ಮೇಲ್ಕಂಡ ಕ್ರ.ಸಂ. (1) ರಿಂದ (7) ರವರೆಗಿನ ಘಟಕಗಳನ್ನು ನಿಯಮಾನುಸಾರ ದರಗಳ ಅನುಮೋದನೆ ಪಡೆದು ಅಂದಾಜುಪಟ್ಟಿ ತಯಾರಿಸಿ ನಿಯಮಾನುಸಾರ GeM ಪೋರ್ಟಲ್‌ನಲ್ಲಿ (Government</td></tr>
</table>

| | | |
|---|---|---|
| | | e-Marketplace) ಖರೀದಿಸಿರುತ್ತಾರೆ.<br><br>ಆದರೆ ಕ್ರ.ಸಂ. (8)ರ ಎಲೆಕ್ಟ್ರಿಕಲ್ ವೆಹಿಕಲ್ ಚಾರ್ಜಿಂಗ್ ಪಾಯಿಂಟ್‌ಗೆ (Charging point for EV Vehicles) ಎಸ್.ಆರ್. ದರಗಳು ಲಭ್ಯವಿಲ್ಲದಿರುವುದರಿಂದ ಕೊಟೇಷನ್ ದರಗಳನ್ನು ಪಡೆದು ಸಕ್ಷಮ ಪ್ರಾಧಿಕಾರದಿಂದ ದರಗಳಿಗೆ ಅನುಮೋದನೆ ಪಡೆದು, ಅದರಂತೆ ಅಂದಾಜುಪಟ್ಟಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಕರೆಯಬೇಕಿರುತ್ತದೆ.<br><br>ಆದರೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರು ನೇರವಾಗಿ ಪ್ಯಾಕೇಜ್ ನಲ್ಲಿಯೇ ಇ.ವಿ. ಚಾರ್ಜಿಂಗ್ ಪಾಯಿಂಟ್ ಅನ್ನು ನಮೂದಿಸಿ ಟೆಂಡರ್ ಕರೆದಿರುವ ಬಗ್ಗೆ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆರವರು ಸದರಿಯವರನ್ನು ಅಮಾನತುಗೊಳಿಸುವಂತೆ ಶಿಫಾರಸ್ಸು ಮಾಡಿ ದಿನಾಂಕ: 22-10-2024 ರಂದು ಪೌರಾಡಳಿತ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಈ ಮೇರೆಗೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು, ಶ್ರೀ ಎನ್.ಆರ್. ದಿಲೀಪ್, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ನಗರಸಭೆ ಕೋಲಾರರವರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಿಸಿಎ) 1957ರ ನಿಯಮ 10(1)ರಡಿ ಸೇವೆಯಿಂದ ಅಮಾನತ್ತುಗೊಳಿಸಲು, ಸರ್ಕಾರಕ್ಕೆ ದಿನಾಂಕ: 02.12.2024 ರಂದು ಪ್ರಸ್ತಾವನೆ ಸಲ್ಲಿಸಿದ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 84 ಬಿಎಂಎಸ್ 2024 (ಇ), ದಿನಾಂಕ: 09-12-2024 ರಂತೆ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ, ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. |

ಇ) ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ಇದುವರೆಗೂ ಖರೀದಿ ಮಾಡಲಾಗಿರುವ ಪರಿಕರಗಳು ಯಾವುವು; ಹಾಗೂ ಖರೀದಿ ಮಾಡುವ ಸಂದರ್ಭದಲ್ಲಿ ಯಾವ ನೀತಿ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ:

ಸ್ವಚ್ಛ ಭಾರತ ಮಿಷನ್ (ನ) – 1.0 ಯೋಜನೆಯಡಿಯಲ್ಲಿ ಖರೀದಿ ಮಾಡಲಾಗಿರುವ ಪರಿಕರಗಳ ವಿವರ ಈ ಕೆಳಕಂಡಂತಿದೆ.

1. 06 ಸಂಖ್ಯೆಯ ವಿದ್ಯುತ್ ಚಾಲಿತ ಮಿನಿ ಟಿಪ್ಪರ್‌ಗಳು.
2. 02 ಸಂಖ್ಯೆಯ ಟ್ರಾಕ್ಟರ್ ಇಂಜಿನ್‌ಗಳು.
3. ತಳ್ಳುಗಾಡಿ (Push Cart) ಗಳು.
4. ವೀಲ್ ಬ್ಯಾರೋಗಳು.
5. ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ ವಾಹನ.
6. ಕಾಂಪ್ಯಾಕ್ಟರ್ ವಾಹನ.
7. ಸಿ.ಸಿ. ಕ್ಯಾಮೆರಾಗಳು.
8. ವಿದ್ಯುತ್ ಚಾಲಿತ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್.

ಮೇಲ್ಕಂಡ ಪರಿಕರಗಳನ್ನು ಕೆ.ಟಿ.ಪಿ.ಪಿ. ನಿಯಮಾವಳಿಗಳ ರೀತ್ಯಾ GeM Portal (Government e-Marketplace) ನಲ್ಲಿ ಖರೀದಿ ಮಾಡಲಾಗಿರುತ್ತದೆ.

ಈ) ಪರಿಕರಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿತ್ತೆ; ಹಾಗಿದ್ದಲ್ಲಿ, ಟೆಂಡರ್ ನಲ್ಲಿ ಭಾಗವಹಿಸಿದ ಗುತ್ತಿಗೆದಾರರೂ ಯಾರ್ಯಾರು? (ಸಂಪೂರ್ಣ ಮಾಹಿತಿ ಒದಗಿಸುವುದು)

ಸದರಿ ಪರಿಕರಗಳನ್ನು ಸರಬರಾಜು ಮಾಡಲು ಜೆಮ್ (GeM) ಪೋರ್ಟಲ್ ನಲ್ಲಿ ಈ ಕೆಳಕಂಡಂತೆ ಟೆಂಡರ್ ಕರೆಯಲಾಗಿರುತ್ತದೆ.

| ಕ್ರ. ಸಂ. | ಪರಿಕರಗಳು | ಭಾಗವಹಿಸಿರುವ ಗುತ್ತಿಗೆದಾರರು |
|---|---|---|
| ಪ್ಯಾಕೇಜ್ - 1 | 1. ಟ್ರಾಕ್ಟರ್ ಇಂಜಿನ್‌ಗಳು.<br>2. Front End with Back Hoe Loader<br>3. ಕಾಂಪ್ಯಾಕ್ಟರ್ ವಾಹನ,<br>4. ಸಿ.ಸಿ. ಕ್ಯಾಮೆರಾಗಳು,<br>5. charging point for EV vehicles | 1. ರೇ-ಇಂಜಿನಿಯರಿಂಗ್ & ಫ್ಯಾಬ್ರಿಕೇಟರ್ಸ್.<br>2. ಆಲ್ಫಾ ಟೆಕ್ನಾಲಜೀಸ್<br>3. ತೇಜಸ್ವಿನಿ ಸಲ್ಯೂಷನ್ಸ್. |
| ಪ್ಯಾಕೇಜ್ -2 | 1. ವಿದ್ಯುತ್ ಚಾಲಿತ ಮಿನಿ ಟಿಪ್ಪರ್ ವಾಹನ,<br>2. ತಳ್ಳುಗಾಡಿಗಳು<br>3. ವೀಲ್ ಬ್ಯಾರೋಗಳು | 1. ರೇ-ಇಂಜಿನಿಯರಿಂಗ್ & ಫ್ಯಾಬ್ರಿಕೇಟರ್ಸ್.<br>2. ಆಲ್ಫಾ ಟೆಕ್ನಾಲಜೀಸ್<br>3. ತೇಜಸ್ವಿನಿ ಸಲೂಷನ್ಸ್. |

(ಕಡತ ಸಂಖ್ಯೆ: ನಅಇ 45 ಸಿಎಸ್ಎಸ್ 2025)

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು

ಅನುಬಂಧ-1

(ರೂ. ಲಕ್ಷಗಳಲ್ಲಿ)

| ಕಾಮಗಾರಿಯ ವಿವರ | ವೆಚ್ಚ ಮಾಡಲಾದ ಮೊತ್ತ |
|---|---|
| ಲ್ಯಾಂಡ್‌ಫಿಲ್ ಸೈಟ್‌ನ ಸಮಗ್ರ ಅಭಿವೃದ್ಧಿ | 475.22 |
| EV ವಾಹನಗಳಿಗೆ 2 ಸಂಖ್ಯೆಯ ಚಾರ್ಜಿಂಗ್ ಪಾಯಿಂಟ್‌ಗಳನ್ನು ಖರೀದಿಸುವುದು | 8.00 |
| 15 ಸಂಖ್ಯೆಯ ಪುಷ್‌ಕಾರ್ಟ್‌ಗಳನ್ನು ಖರೀದಿಸುವುದು. | 5.46 |
| 12 ಸಂಖ್ಯೆಯ ವೀಲ್ ಬ್ಯಾರೋಗಳನ್ನು ಖರೀದಿಸುವುದು | 2.96 |
| 1 ಸಂಖ್ಯೆಯ ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್‌ಹೋ ಅನ್ನುಖರೀದಿಸುವುದು | 47.27 |
| 1 ಸಂಖ್ಯೆಯ ಕಾಂಪ್ಯಾಕ್ಟರ್ ನ್ನುಖರೀದಿಸುವುಧು | 47.67 |
| 6 ಸಂಖ್ಯೆಯ ಸಿ.ಸಿ. ಕ್ಯಾಮೆರಾಗಳನ್ನು ಖರೀದಿಸುವುದು | 6.49 |
| **ಒಟ್ಟು** | **593.07** |